## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಬಿ.ಇ.ಎ ಶಿಕ್ಷಣ ಮಹಾವಿದ್ಯಾಲಯ, ದಾವಣಗೆರೆ, ದಾವಣಗೆರೆ ಜಿಲ್ಲೆ, ಈ ಕಾಲೇಜಿನ ಬೋಧಕ ಮತ್ತು ಬೋಧಕೇತರ ಹುದ್ದೆಗಳ ನೇಮಕಾತಿಯನ್ನು ವೇತನಾನುದಾನಕ್ಕೆ ಅನುಮೋದಿಸುವ ಬಗ್ಗೆ.

ಓದಲಾಗಿದೆ:
1. ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ನಿರ್ದೇಶನಾಲಯದ ಪತ್ರಗಳು: ಸಂಖ್ಯೆ: ಶಿಶಿ3 ಇತರೆ ಅನುದಾನ 02/2004-05, ದಿನಾಂಕ 1) 31-12-2010 ಮತ್ತು 2) ದಿನಾಂಕ 04-11-2011
2. ಸರ್ಕಾರಿ ಆದೇಶ ಸಂಖ್ಯೆ:ಇಡಿ 295 ಯುಎನ್‌ಇ 2010, ದಿನಾಂಕ 13-04-2011
3. ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆಯ ನಿರ್ದೇಶಕರ ಪತ್ರ ಸಂಖ್ಯೆ:ಶಿಶಿ3.ಇತರೆ ಅನುದಾನ19/2008-09/7371/2011 ದಿನಾಂಕ:30-04-2011.
4. ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ 06 ವಿವಿಧ 2001,ದಿನಾಂಕ12-10-2001.

**ಪ್ರಸ್ತಾವನೆ:**

ಮೇಲ (1)ರಲ್ಲಿ ಓದಲಾಗಿರುವ ಪ್ರಸ್ತಾವನೆಯನ್ವಯ ಉಲ್ಲೇಖ(2)ರಲ್ಲಿನ ಸರ್ಕಾರಿ ಆದೇಶದಲ್ಲಿ, ಕೆಲವು ಷರತ್ತುಗಳನ್ನು ವಿಧಿಸಿ, ಒಟ್ಟು ಆರು ಶಿಕ್ಷಣ ಮಹಾವಿದ್ಯಾಲಯಗಳ ಸಿಬ್ಬಂದಿಗಳನ್ನು ವೇತನಾನುದಾನಕ್ಕೆ ಒಳಪಡಿಸಲು ನಿರ್ಣಯಿಸಲಾಗಿದೆ. ಸದರಿ ಆದೇಶದಲ್ಲಿರುವ ಮಹಾವಿದ್ಯಾಲಯಗಳ ಪಟ್ಟಿಯಲ್ಲಿ, ಬಿ.ಇ.ಎ ಶಿಕ್ಷಣ ಮಹಾವಿದ್ಯಾಲಯ, ದಾವಣಗೆರೆ, ದಾವಣಗೆರೆ ಜಿಲ್ಲೆ, ಈ ಕಾಲೇಜು ಕ್ರಮ ಸಂ. 01ರಲ್ಲಿ ಇರುತ್ತದೆ.

ಮೇಲೆ ಓದಲಾಗಿರುವ ಉಲ್ಲೇಖ (3)ರ ಪತ್ರದಲ್ಲಿ ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆಯ ನಿರ್ದೇಶಕರು, ಬಿ.ಇ.ಎ ಶಿಕ್ಷಣ ಮಹಾವಿದ್ಯಾಲಯ, ದಾವಣಗೆರೆ, ದಾವಣಗೆರೆ ಜಿಲ್ಲೆ, ಈ ಕಾಲೇಜು ದಿನಾಂಕ: 22-09-1980ರಂದು ಪ್ರಾರಂಭವಾಗಿದ್ದು, ಸತತವಾಗಿ ನಡೆಯುತ್ತಿರುವುದಾಗಿಯೂ ಹಾಗೂ ಈ ಸಂಸ್ಥೆಯ ಮೇಲೆ ಯಾವುದೇ ನ್ಯಾಯಾಲಯ ಪ್ರಕರಣಗಳು ಇರುವುದಿಲ್ಲವೆಂದೂ ಹಾಗೂ ಸದರೀ ಕಾಲೇಜಿಗೆ NCTEಯ ನಿಯಮದಂತೆ ಸ್ವಂತ ಕಟ್ಟಡವಿದ್ದು, ಎಲ್ಲಾ ರೀತಿಯ ಮೂಲ ಸೌಕರ್ಯಗಳನ್ನು ಹೊಂದಿರುವುದಾಗಿಯೂ ತಿಳಿಸಿದ್ದಾರೆ. ಹಾಗೆಯೇ ಸದರಿ ಕಾಲೇಜಿನಲ್ಲಿ ಸೇವೆ ಸಲ್ಲಿಸುತ್ತಿರುವ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳು NCTE/ ರಾಜ್ಯ ನೇಮಕಾತಿ ನಿಯಮಗಳನ್ವಯ ಶೈಕ್ಷಣಿಕ ವಿದ್ಯಾರ್ಹತೆ ಇತ್ಯಾದಿಗಳ ಬಗ್ಗೆ ಮಾಹಿತಿ/ ಅಂಕಿ ಅಂಶಗಳನ್ನು ತಮ್ಮ ಪ್ರಸ್ತಾವನೆಯಲ್ಲಿ ನೀಡಿರುತ್ತಾರೆ. ಇದರ ಜೊತೆಗೆ, ಪ್ರಾಂಶುಪಾಲರನ್ನೊಳಗೊಂಡ ತ್ರಿಸದಸ್ಯರ ಸಮಿತಿ, ಸರ್ಕಾರಿ ಶಿಕ್ಷಣ ಮಹಾವಿದ್ಯಾಲಯ, ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ, ಇವರು ಸಲ್ಲಿಸಿರುವ ತಪಾಸಣಾ ವರದಿ ಹಾಗೂ ಸಿಬ್ಬಂದಿಗಳ ವಿದ್ಯಾರ್ಹತೆಗಳ ಬಗ್ಗೆ ದಾಖಲೆಗಳನ್ನೂ ತಮ್ಮ ಪ್ರಸ್ತಾವನೆಯ ಜೊತೆಯಲ್ಲಿ ಸರ್ಕಾರಕ್ಕೆ ಸಲ್ಲಿಸಿದ್ದು, ಅವುಗಳನ್ನು ಸಹ ಸಂವೀಕ್ಷಿಸಲಾಗಿದೆ.

ಮೇಲೆ (4)ರಲ್ಲಿ ಓದಲಾಗಿರುವ ಸರ್ಕಾರಿ ಅಧಿಸೂಚನೆಯಲ್ಲಿ 100 ವಿದ್ಯಾರ್ಥಿಗಳ ಸಂಖ್ಯಾಬಲವಿರುವ ಶಿಕ್ಷಣ ಮಹಾವಿದ್ಯಾಲಯಗಳಲ್ಲಿ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯ ಮಾದರಿಯನ್ನು (ಸ್ಟಾಫ್ ಪ್ಯಾಟರ್ನ್) ನಿರ್ಧರಿಸಿದ್ದು. ಆ ಪ್ರಕಾರ ಒಬ್ಬ ಪ್ರಾಂಶುಪಾಲರು, ಉಪನ್ಯಾಸಕರುಗಳು ಸೇರಿದಂತೆ ಒಟ್ಟು 10 ಬೋಧಕ ಹುದ್ದೆಗಳು ಮತ್ತು 17 ವಿವಿಧ ಬೋಧಕೇತರ ಹುದ್ದೆಗಳು, ಈ ರೀತಿ ಒಟ್ಟು 27 ಹುದ್ದೆಗಳ ಮಂಜೂರಾತಿಗೆ ಅವಕಾಶವಿರುತ್ತದೆ.

Scanned by CamScanner

ಈ ಅಂಶಗಳ ಹಿನ್ನಲೆಯಲ್ಲಿ, ಬಿ.ಇ.ಎ ಶಿಕ್ಷಣ ಮಹಾವಿದ್ಯಾಲಯ, ದಾವಣಗೆರೆ, ದಾವಣಗೆರೆ ಜಿಲ್ಲೆ, ಇಲ್ಲಿನ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ಹುದ್ದೆಗಳನ್ನು ವೇತನಾನುದಾನಕ್ಕೆ ಒಳಪಡಿಸುವ ಸಲುವಾಗಿ ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆಯ ನಿರ್ದೇಶಕರು ತಮ್ಮ ಶಿಫಾರಸ್ಸುಗಳೊಂದಿಗೆ ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆಯನ್ನು ಕೂಲಂಕುಶವಾಗಿ ಪರಿಶೀಲಿಸಲಾಗಿದೆ.

**ಸರ್ಕಾರದ ಆದೇಶ ಸಂಖ್ಯೆ: ಇಡಿ 103 ಯುಎನ್ಇ 2009, ಬೆಂಗಳೂರು, ದಿನಾಂಕ: 04-12-2012**

ಮೇಲಿನ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಬಿ.ಇ.ಎ ಶಿಕ್ಷಣ ಮಹಾವಿದ್ಯಾಲಯ, ದಾವಣಗೆರೆ, ದಾವಣಗೆರೆ ಜಿಲ್ಲೆ, ಈ ಶಿಕ್ಷಣ ಮಹಾವಿದ್ಯಾಲಯದ ಈ ಕೆಳಕಂಡ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ಹುದ್ದೆಗಳನ್ನು ಕೆಳಗೆ ಹೇಳಿರುವ ಷರತ್ತುಗೊಳಪಟ್ಟು ವೇತಾನಾನುದಾನಕ್ಕೆ ಒಳಪಡಿಸಿ ಆದೇಶಿಸಲಾಗಿದೆ.

**ಬೋಧಕ ಸಿಬ್ಬಂದಿ:**

| ಕ್ರಮ ಸಂಖ್ಯೆ | ಬೋಧಕರ ಹೆಸರು ಶ್ರೀಮತಿ/ಶ್ರೀ | ಜನ್ಮ ದಿನಾಂಕ | ನೇಮಕಾತಿ ದಿನಾಂಕ |
|---|---|---|---|
| 1 | ಶ್ರೀಮತಿ ಎಸ್.ಎನ್.ಸುನಂದ, ಪ್ರಾಂಶುಪಾಲರು (ದಿನಾಂಕ:03-04-2008ರಂದು ಪ್ರಾಂಶುಪಾಲರ ಹುದ್ದೆಗೆ ವರದಿಮಾಡಿಕೊಂಡಿರುತ್ತಾರೆ) | 19-01-1957 | 29-09-1980 |
| 2 | ಡಾ: ಸಿ.ಆರ್.ಶಕೀಲಾ ಬಾನು, ಉಪನ್ಯಾಸಕರು | 14-02-1960 | 09-08-1985 |
| 3 | ಶ್ರೀ ಎಸ್.ರಾಜಶೇಖರ, ಉಪನ್ಯಾಸಕರು | 01-07-1960 | 09-08-1985 |
| 4 | ಡಾ: ಜಿ.ಎನ್.ಅಶೋಕ, ಉಪನ್ಯಾಸಕರು | 20-07-1964 | 30-09-1991 |
| 5 | ಶ್ರೀಮತಿ.ಆರ್.ಎಲ್.ಶೈಲಜಾ, ಉಪನ್ಯಾಸಕರು | 03-06-1965 | 01-09-1992 |
| 6 | ಡಾ: ಎ.ಜೆ. ನೀತಾ. ಉಪನ್ಯಾಸಕರು | 09-08-1976 | 27-10-2004 |
| 7 | ಡಾ: ಎಂ.ಸಿ.ಕೌಶಿಕ್ ಉಪನ್ಯಾಸಕರು | 20-04-1977 | 29-10-2004 |
| 8 | ಶ್ರೀ ಮುರುಗೇಶಿ.ಕೆ, ಉಪನ್ಯಾಸಕರು | 18-07-1976 | 04-04-2008 |
| 9 | ಶ್ರೀ ಟಿ.ಎನ್.ನಿಶಾಂತ್, ಉಪನ್ಯಾಸಕರು | 13-06-1980 | 04-04-2008 |
| 10 | ಶ್ರೀ ಎನ್.ಎಂ.ರಾಜೇಶ್, ಉಪನ್ಯಾಸಕರು | 28-03-1980 | 04-04-2008 |

**ಬೋಧಕೇತರ ಸಿಬ್ಬಂದಿ:**

| ಕ್ರಮ ಸಂಖ್ಯೆ | ಹೆಸರು ಮತ್ತು ಪದನಾಮ ಶ್ರೀಮತಿ/ಶ್ರೀ | ಜನ್ಮದಿನಾಂಕ | ನೇಮಕಾತಿ ದಿನಾಂಕ |
|---|---|---|---|
| 1 | ಶ್ರೀ ಚಂದ್ರೇಗೌಡ.ಎಸ್, ದೈಹಿಕ ನಿರ್ದೇಶಕರು | 10-02-1982 | 04-04-2008 |
| 2 | ಶ್ರೀ ವೈ.ಎಂ.ದಯಾನಂದಸ್ವಾಮಿ, ಗ್ರಂಥಪಾಲಕ | 24-06-1956 | 01-10-1980 |
| 3 | ಶ್ರೀ ಅಶೋಕ.ಪಿ.ಡಿ, ತಾಂತ್ರಿಕ ಸಹಾಯಕ | 22-04-1981 | 05-04-2008 |
| 4 | ಶ್ರೀಮತಿ.ಸುಜಾತ.ಎಂ.ಹೆಚ್, ಪ್ರ.ದ.ಸ. | 11-11-1967 | 11-12-1996 |
| 5 | ಶ್ರೀ ಜಿ.ಆರ್.ಕರಿಬಸಪ್ಪ, ಪ್ರ.ದ.ಸ | 01-06-1970 | 11-12-1996 |
| 6 | ಶ್ರೀ ಟಿ.ವಿಜಯ್, ಸಿಸಿಟಿ | 06-06-1980 | 04-04-2008 |
| 7 | ಶ್ರೀ ಹನುಮಂತರಾವ್, ಸಿಸಿಟಿ | 18-07-1981 | 04-04-2008 |
| 8 | ಶ್ರೀ ವಿನಯ್.ಇ.ಎಸ್, ಗ್ರಂಥಾಲಯ ಸಹಾಯಕ | 17-07-1977 | 07-04-2008 |
| 9 | ಶ್ರೀ ಎಂ.ಮಂಜಪ್ಪ, ಅಟೆಂಡರ್ | 01-06-1967 | 11-12-1996 |



Scanned by CamScanner

| | | | |
|---|---|---|---|
| 10 | ಶ್ರೀ ರಾಮ.ಕೆ.ಎನ್, ಅಟೆಂಡರ್ | 20-07-1972 | 04-04-2008 |
| 11 | ಶ್ರೀ ಸುರೇಶ್.ಆರ್, ಅಟೆಂಡರ್ | 09-07-1982 | 05-04-2008 |
| 12 | ಶ್ರೀ ಟಿ.ಜಿ.ಬಸವರಾಜ, ಸೇವಕ | 19-05-1969 | 11-12-1996 |
| 13 | ಶ್ರೀ ಸತೀಶ್ ಕುಮಾರ್.ಕೆ.ಆರ್, ಸೇವಕ | 04-07-1975 | 05-04-2008 |
| 14 | ಶ್ರೀ ಎನ್.ಪ್ರಭು, ಸೇವಕ | 01-06-1976 | 05-04-2008 |
| 15 | ಶ್ರೀ ದುರ್ಗಪ್ಪ, ಸೇವಕ | 06-05-1982 | 05-04-2008 |
| 16 | ಶ್ರೀ ಎಂ.ಜಿ.ಕುಮಾರಪ್ಪ, ಕಾವಲುಗಾರ | 11-01-1964 | 11-12-1996 |
| 17 | ಶ್ರೀ ಪರುಶುರಾಮಪ್ಪ.ಬಿ, ಸ್ವೀಪರ್ | 20-07-1976 | 05-04-2008 |

<u>ಷರತ್ತುಗಳು:-</u>

1. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳ ಪ್ರಾತಿನಿಧ್ಯದಲ್ಲಿ ಮೀಸಲಾತಿ ಕೊರತೆಯನ್ನು ಭವಿಷ್ಯತ್ತಿನಲ್ಲಿ ತೆರವಾಗುವ ಎಲ್ಲಾ ಹುದ್ದೆಗಳನ್ನು ಮೀಸಲಾತಿ ಕೊರತೆ ಸರಿದೂಗುವವರೆಗೆ ಸಂಬಂಧಪಟ್ಟ ಮೀಸಲಾತಿ ಅಭ್ಯರ್ಥಿಗಳಿಗೆ ಮೀಸಲಿಡತಕ್ಕದ್ದು.
2. ಉಪನ್ಯಾಸಕರ ಹುದ್ದೆಯಲ್ಲಿ ನೇಮಕಗೊಂಡಿರುವ ಶ್ರೀ ಮುರುಗೇಶ.ಕೆ ಇವರು ನೇಮಕಾತಿಯು ಅನುಮೋದನೆಗೊಂಡ ದಿನಾಂಕದಿಂದ ಎರಡು ವರ್ಷಗಳ ಅವಧಿಯಲ್ಲಿ ಸ್ಕೂಲ್ ಸಬ್ಜೆಕ್ಟ್‌ನಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆಯತಕ್ಕದ್ದು. ಹಾಗೆಯೇ, ಸಿಸಿಟಿ ಹುದ್ದೆಗಳಲ್ಲಿ ನೇಮಕಾತಿ ಹೊಂದಿರುವ ಶ್ರೀ ಟಿ.ವಿಜಯ್ ಹಾಗೂ ಶ್ರೀ ಹನುಮಂತರಾವ್ ಇವರುಗಳು ನೇಮಕಾತಿಯು ಅನುಮೋದನೆಗೊಂಡ ದಿನಾಂಕದಿಂದ ಎರಡು ವರ್ಷಗಳ ಅವಧಿಯಲ್ಲಿ ಬೆರಳಚ್ಚು ಕನ್ನಡ ಪರಿಕ್ಷೆಯಲ್ಲಿ ತೇರ್ಗಡೆಯಾಗತಕ್ಕದ್ದು.
3. ಈ ಕಾಲೇಜಿನ ಬೋಧಕ/ಬೋಧಕೇತರ ಸಿಬ್ಬಂದಿಗಳ ಶೈಕ್ಷಣಿಕ ಅರ್ಹತೆಗೆ ಸಂಬಂಧಿಸಿದ ಎಲ್ಲಾ ಅಂಕಪಟ್ಟಿ/ಪ್ರಮಾಣ ಪತ್ರಗಳ ಸತ್ಯಾಸತ್ಯತೆಯನ್ನು ಸಂಬಂಧಿಸಿದ ಪ್ರಾಧಿಕಾರಗಳಿಂದ ದೃಢೀಕರಿಸಿಕೊಂಡ ನಂತರವೇ ವೇತನ ಪಾವತಿಗೆ ಕ್ರಮ ಕೈಗೊಳ್ಳುವುದು.
4. ಪರಿಶಿಷ್ಟ ಜಾತಿ/ಪಂಗಡ ಮತ್ತು ಹಿಂದುಳಿದ ವರ್ಗಗಳ ಅಡಿಯಲ್ಲಿ ನೇಮಕಾತಿ ಹೊಂದಿದ್ದಲ್ಲಿ, ಅವರು ತಮ್ಮ ಜಾತಿ ಬಗ್ಗೆ ಸಿಂಧುತ್ವ ಪ್ರಮಾಣ ಪತ್ರವನ್ನು ಸಂಬಂಧಪಟ್ಟ ಪ್ರಾಧಿಕಾರದಿಂದ ಪಡೆದ ನಂತರವೇ ಅಂತಹ ಸಿಬ್ಬಂದಿಗಳ ವೇತನ ಪಾವತಿಸಲು ಕ್ರಮ ವಹಿಸುವುದು.
5. ಹುದ್ದೆ ಅನುಮೋದನೆಗೊಂಡಿರುವ ಸಿಬ್ಬಂದಿಯು ಯಾವುದೇ ಹಂತದಲ್ಲಿ ತಪ್ಪು ಹೇಳಿಕೆ/ಅಸತ್ಯವಾದ ಮಾಹಿತಿಯನ್ನು ಒದಗಿಸಿದಲ್ಲಿ, ಅಂತಹ ನೇಮಕಾತಿಯನ್ನು ರದ್ದುಪಡಿಸಲಾಗುವುದು.
6. ಸಿಬ್ಬಂದಿಗಳ ವೇತನಾನುದಾನವು ಈ ಆದೇಶ ಹೊರಡಿಸಿದ ದಿನಾಂಕದಿಂದ ಜಾರಿಗೆ ಬರುತ್ತದೆ. ಯಾವುದೇ ಕಾರಣಕ್ಕೂ ಹಿಂದಿನ ಸೇವೆಯನ್ನು ವೇತನಾನುದಾನಕ್ಕೆ ಪರಿಗಣಿಸಬಾರದು.
7. ಸದರಿ ಕಾಲೇಜಿನ ಫಲಿತಾಂಶ ವಿಶ್ವವಿದ್ಯಾಲಯದಿಂದ ಮಾನ್ಯತೆ ಪಡೆದ ಇತರೆ ಕಾಲೇಜುಗಳಲ್ಲಿನ ಸರಾಸರಿ ಫಲಿತಾಂಶಕ್ಕಿಂತ ಕಡಿಮೆ ಇರತಕ್ಕದ್ದಲ್ಲ. ಈ ಬಗ್ಗೆ ಕಳೆದ 05 ವರ್ಷಗಳ ಫಲಿತಾಂಶವನ್ನು ಆಧರಿಸಿ ವೇತನಾನುದಾನಕ್ಕೆ ಒಳಪಡಿಸಲು ಅರ್ಹತೆ ಪಡೆದಿರುವುದನ್ನು ದೃಢೀಕರಿಸಿಕೊಂಡು ಕ್ರಮವಹಿಸಬೇಕು.
8. ಸದರಿ ಕಾಲೇಜನ್ನು ವೇತನಾನುದಾನಕ್ಕೆ ಒಳಪಡಿಸಲು ತಗುಲುವ ವೆಚ್ಚವನ್ನು ಇಲಾಖೆಗೆ ಒದಗಿಸಿದ ಯೋಜನಾ ಅನುದಾನದ ಮಿತಿಯಲ್ಲಿಯೇ ಭರಿಸಲು ಹೊಂದಾಣಿಕೆ ಮಾಡಿಕೊಳ್ಳಬೇಕು.
9. ಈ ಕಾಲೇಜಿನ ಬೋಧಕ ಮತ್ತು ಇತರೆ ಸಿಬ್ಬಂದಿಗಳ ವೇತನವನ್ನು ರಾಜ್ಯ ವೇತನ ಶ್ರೇಣಿಯಲ್ಲಿ ನಿಗದಿಗೊಳಿಸತಕ್ಕದ್ದು.



Scanned by CamScanner

ಈ ಆದೇಶವನ್ನು ಆರ್ಥಿಕ ಇಲಾಖೆಯು ಟಿಪ್ಪಣಿ ಸಂ. ಆಇ 534 ವೆಚ್ಚ-8/2011, ದಿನಾಂಕ:30-07-2011ರಲ್ಲಿಯೂ ಹಾಗೂ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯು ಟಿಪ್ಪಣಿ ಸಂ. ಸಿಆಸುಇ 502 ಸೇನಿಎ 2012, ದಿನಾಂಕ 16-11-2012ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಪ್ರಕಾಶ್‌ರಾವ್ ಕೇಸರ್‌ಕರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ(ವಿಶ್ವವಿದ್ಯಾಲಯಗಳು)

ಇವರಿಗೆ:

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು - ಇದನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲು ಕೋರಿದೆ.

ಪ್ರತಿಯನ್ನು

1. ಮಹಾಲೇಖಪಾಲರು (ಎ ಮತ್ತು ಇ), ಕರ್ನಾಟಕ, ಬೆಂಗಳೂರು.
2. ನಿರ್ದೇಶಕರು, ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ, ಬೆಂಗಳೂರು.
3. ನಿರ್ದೇಶಕರು, ರಾಜ್ಯ ಖಜಾನೆ ಇಲಾಖೆ, ಬೆಂಗಳೂರು/ಜಂಟಿ ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ,ಬೆಂಗಳೂರು.
4. ಕುಲಸಚಿವರು, ದಾವಣಗೆರೆ ವಿಶ್ವವಿದ್ಯಾಲಯ, ದಾವಣಗೆರೆ.
5. ಕಾರ್ಯದರ್ಶಿ, ಬಾಪೂಜಿ ವಿದ್ಯಾ ಸಂಸ್ಥೆ, ಪಿ.ಜಿ. ಬಡಾವಣೆ, ದಾವಣಗೆರೆ.
6. ಪ್ರಾಂಶುಪಾಲರು, ಬಿ.ಇ.ಎ ಶಿಕ್ಷಣ ಮಹಾವಿದ್ಯಾಲಯ, ದಾವಣಗೆರೆ.
7. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವೆಚ್ಚ-8, ವಿಧಾನಸೌಧ.
8. ವಿಶೇಷಾಧಿಕಾರಿ ಹಾಗೂ ಸರ್ಕಾರದ ಪದನಿಮಿತ್ತ ಅಧೀನ ಕಾರ್ಯದರ್ಶಿ, ಶಿಕ್ಷಣ ಇಲಾಖೆ (ಯೋಜನೆ).
9. ಪ್ರಾಂಶುಪಾಲರು, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ.
10. ಸಂಬಂಧಿಸಿದ ಎಲ್ಲಾ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯವರಿಗೆ - (ನಿರ್ದೇಶಕರು, ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ, ಇವರ ಮುಖಾಂತರ).
11. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ/ಸರ್ಕಾರದ ಉಪಕಾರ್ಯದರ್ಶಿ (ವಿಶ್ವವಿದ್ಯಾಲಯಗಳು) ಯವರ ಆಪ್ತ ಸಹಾಯಕರು.
12. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

Scanned by CamScanner